**1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ,**

**ಕಡೂರು.**

**<u>ಅಸಲು ದಾವೆ ಸಂಖ್ಯೆ.209/2019</u>**

ಪಿ.ಡಬ್ಲ್ಯೂ:1

**ದಿನಾಂಕ:09-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ: ಶ್ರೀ ಡಿ.ಜಿ.ಆರ್. ವಕೀಲರಿಂದ:-</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ಸರ್ವೇನಂಬರ್.127/2 ಎ 6 ಮಲ್ಲೇಶ್ವರ ಗ್ರಾಮದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ-1 ಎಂದು, ಸರ್ವೇನಂಬರ್.127/2 ಎ 1 ಮಲ್ಲೇಶ್ವರ ಗ್ರಾಮದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ-2 ಎಂದು, ಸರ್ವೇನಂಬರ್.127/2 ಎ 1 ಮಲ್ಲೇಶ್ವರ ಗ್ರಾಮದ ಹಿಸ್ಸಾಸರ್ವೇ ಬಾಬ್ತು ದೃಢೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ-3 ಎಂದು, ಕರ್ನಾಟಕ ರಿವಿಜನ್ ಸೆಟ್ಲಮೆಂಟ್ ಆಕಾರ ಬಂದ್ ನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ-4 ಎಂದು, ಮ್ಯುಟೇಶನ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ-5 ಎಂದು, ಕಡೂರು ಪೋಲೀಸರು ನೀಡಿರುವ ಎನ್.ಸಿ.ಆರ್. ನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ-6 ಎಂದು, ಎರಡು ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತೇನೆ, ಅವುಗಳನ್ನು ನಿಪಿ-7 ಮತ್ತು ನಿಪಿ-8 ಎಂದು ಗುರುತಿಸಲಾಯಿತು.

**ಪ್ರತಿವಾದಿಗಳು ಗೈರು ಹಾಜರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಓ

ಸಹಿ/-

1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.